ಶ್ರೀ ಎನ್. ಎ. ಕರಿಲಿಂಗಣ್ಣನವರ್—ಭೂಸುಧಾರಣಾ ಶಾಸನ ಬರುವುದಕ್ಕಿಂತ ಮುಂಚೆ ಭೂಮಾಲೀಕರು ರೈತರನ್ನು ಬಹಳ ಗೋಳಾಡಿಸಿದ್ದಾರೆ. ಹೀಗಿದ್ದರೂ ಈಗ ರೈತನಿಗೆ ಭೂಮಿ ಸಿಕ್ಕುವುದು ಬಹಳ ಜಟಿಲವಾಗಿದೆ. 1957ಕ್ಕಿಂತ ಪೂರ್ವದಲ್ಲಿ ಆರು ವರ್ಷಕಾಲ ಗೇಣಿದಾರ ನಾಗಿದ್ದಿರಬೇಕೆಂದು ಈ ಕಾಯಿದೆಯಲ್ಲಿ ಹೇಳುತ್ತಾರೆ. ಬೊಂಬಾಯಿ ಕಾಯಿದೆಯಲ್ಲಿ 1952 ಕ್ಕಿಂತ ಹಿಂದೆ ಆರುವರ್ಷ ಭೂಮಿಯನ್ನು ಪಡಿದಿದ್ದರೆ ಅಂಥ ರೈತರಿಗೆ ಭೂಮಿ ಸಿಕ್ಕುವಂತೆ ಮಾಡಿದ್ದಾರೆ. ಇಲ್ಲಿಯೂ ಹೀಗೆ ಮಾಡಿದರೆ ರೈತರಿಗೆ ಭೂಮಿ ಸಿಕ್ಕುತ್ತದೆ. ಭೂ ಮಾಲೀಕರು ರೈತರಿಂದ ಭೂಮಿಯನ್ನು ಕಸಿದುಕೊಂಡಿದ್ದಾರೆ. ಆದುದರಿಂದ 1952ರಿಂದ ಹಿಂದೆ ಆರುವರ್ಷ ಎಂದಿಡಬೇಕೆಂದು ಸಲಹೆ ಮಾಡುತ್ತೇನೆ.

ಸೀಲಿಂಗನ್ನು ಸ್ಟಾಂಡರ್ಡ್ ಎಕರೆಗಳ ಮೇಲೆ ಗೊತ್ತುಮಾಡಿದ್ದಾರೆ. 30 ಅಂಗುಲ ಮಳೆ ಇದ್ದರೆ ಆ ಪ್ರದೇಶದಲ್ಲಿ 108 ಎಕರೆ ಸೀಲಿಂಗ್ ನಿರ್ಧಾರ ಮಾಡಿದ್ದಾರೆ. ನಮ್ಮ ಗೋಕಾಕ್ ಬೆಳಗಾವಿ, ಕಾನಾಪೂರ್, ಹುಕ್ಕೇರಿ, ಮತ್ತು ಚಿಕ್ಕೋಡಿ, ಬೈಲಹೊಂಗಲ, ತಾಲ್ಲೂಕುಗಳಲ್ಲಿ ಜಮೀನಿರುವವರು ಕಡಿಮೆ ಜನ, ಹಾಗಾದರೆ ಪ್ರತಿ ಕುಟುಂಬದಲ್ಲಿ ಸಾಮಾನ್ಯವಾಗಿ ಜನ ಹೆಚ್ಚಾದಂತೆ ಹತ್ತಿರವರೆಗೆ ಹೋದರೆ 216 ಎಕರೆ ಆಗುವುದು 216 ಎಕರೆ ಸೀಲಿಂಗು ಆದರೆ ರೈತರಿಗೆ ಭೂಮಿ ಸಿಗುವ ಬಗೆ ಯೆಂತು ? ಜಮೀನಿರುವವರು ಕಡಿಮೆ ಜನ. ಹಾಗಾದರೆ ಪ್ರತಿ ಸಾಮಾನ್ಯವಾಗಿ 20–30ಎಕರೆ ಇರಬಹುದು. ಒಂದು ಸಂಸಾರಕ್ಕೆ 16 ಎಕರೆ ಅಥವಾ ಎರಡು ಸ್ಟಾಂಡರ್ಡ್ ಎಕರೆ ಇದ್ದರೆ ಉತ್ತಮರೀತಿಯಲ್ಲಿ ಸಂಸಾರ ಮಾಡಬಹುದು. ಈಗ ಗೊತ್ತುಮಾಡಿರುವ ಸೀಲಿಂಗ್ ಪ್ರಕಾರ ಒಂದು ಕುಟುಂಬದಲ್ಲಿ ಹೆಚ್ಚು ಜನರಿದ್ದರೆ ಸೀಲಿಂಗಿನ ಎರಡರಷ್ಟು ಜಮೀನಿಟ್ಟುಕೊಳ್ಳುವುದು. ಎಂದ ಮೇಲೆ 216 ಎಕರೆ ಆಗುತ್ತದೆ. ಹೀಗಾದರೆ ಜಮೀನಿಲ್ಲದ ರೈತರಿಗೆ ಜಮೀನು ಎಲ್ಲಿಂದ ಸಿಕ್ಕಬೇಕು ? ಈ ದೃಷ್ಟಿಯಿಂದ 48 ಎಕರೆಗೆ ಅಂದರೆ, ಮುಂಬಯಿ ಕರ್ನಾಟಕದಲ್ಲಿ ಈಗ ನಿರ್ಧರಿಸಿದಂತೆ ಸೀಲಿಂಗ್ ಹಾಕಬೇಕು. ಭೂಸುಧಾರಣಾ ಶಾಸನವನ್ನು ಮಾಡುವಾಗ ರೈತರಿಗೆ ಹಿತವನ್ನು ಮಾಡಬೇಕೆಂದು ಎಲ್ಲರ ಮನಸ್ಸಿನಲ್ಲಿಯೂ ಇರಬೇಕು. ಅಂತಃಕರಣ ಪೂರ್ವಕವಾಗಿ ಈ ಉದ್ದೇಶವಿದ್ದರೆ ರೈತರಿಗೆ ಭೂಮಿ ಸಿಕ್ಕುವಂತೆ ಮಾಡುವ ಪ್ರಯತ್ನಕ್ಕೆ ಬೆಂಬಲ ಕೊಡಬೇಕು. ಇದು ಬರಿಯ ವ್ಯಾಖ್ಯಾನದಲ್ಲಿ ಕಾಲಕಳೆದರೆ ಪ್ರಯೋಜನವಿಲ್ಲ. ಹೀಗೆ ಮಾಡುವುದರಿಂದ ದೇಶದಲ್ಲಿ ಶೇಕಡ ೩ರಷ್ಟಿರುವ ರೈತರಿಗೆ ಅನುಕೂಲವಾಗುವುದಿಲ್ಲ. ರೈತರಿಗೆ ಅನುಕೂಲ ಮಾಡಬೇಕೆಂದು ಬರಿಯ ಬಾಯಿಮಾತಿನಲ್ಲಿ ಹೇಳುವುದನ್ನು ಬಿಟ್ಟು ಕಾರ್ಯರೂಪದಲ್ಲಿ ಮಾಡಬೇಕು. ರೈತರಿಗೆ ಭೂಮಿ ಸಿಕ್ಕಬೇಕೆಂಬ ಮೂಲತತ್ವಕ್ಕೆ ಎಲ್ಲರೂ ಬೆಂಬಲ ಮಾಡಬೇಕು. ಆದುದರಿಂದ ರೆವಿನ್ಯೂ ಮಂತ್ರಿಗಳು ಹೇಳಿದ ಮಾತನ್ನು ತೀವ್ರಗತಿಯಿಂದ ಕಾರ್ಯಗತ ಮಾಡಲು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

HALF AN HOUR DISCUSSION ON STARRED QUESTION No. 209, *Re:* FAMINE RELIEF WORKS IN DHARWAR DISTRICT.

†ಶ್ರೀ ಎ. ಜೆ. ದೊಡ್ಡಮೇಟಿ (ರೋಣ್).—ಸ್ವಾಮಿ, 11–3–1961ರಲ್ಲಿ ಚರ್ಚೆಯಾದ 9ನೆಯ ಪಟ್ಟಿಯಲ್ಲಿರುವ 209ನೆಯ ಪ್ರಶ್ನೆ ಈರೀತಿ ಇದೆ :

(*a*) ಧಾರವಾಡ ಜಿಲ್ಲೆಯಲ್ಲಿ ಕೈಕೊಂಡ ಕ್ಷಾಮ ಪರಿಹಾರ ಕಾಮಗಾರಿಗಳ ವಿವರಗಳೇನು (ತಾಲ್ಲೂಕುವಾರು),

(*b*) ಆ ಪೈಕಿ ಪೂರ್ತಿಯಾದ ಕಾಮಗಾರಿಗಳ ಸಂಖ್ಯೆ ಎಷ್ಟು ;

(*c*) ಸುರಕ್ಷಿತವಾದ ಹಂತದವರೆಗೆ ತಲುಪಿರುವ ಕಾಮಗಾರಿಗಳ ಸಂಖ್ಯೆ ಎಷ್ಟು ;

(*d*) ಪೂರ್ತಿಯಾಗಿರದ ಕಾಮಗಾರಿಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ಸಂಖ್ಯೆಗಳನ್ನು ಕಾಮಗಾರಿಗಳ ಹೆಸರುಗಳನ್ನೂ ಒದಗಿಸಬೇಕು)

(*e*) ಮೇಲ್ಕಂಡ ಕಾಮಗಾರಿಗಳ ಪೈಕಿ ರಸ್ತೆ ನಿರ್ಮಾಣದ ಕಾಮಗಾರಿಗಳನ್ನು ಜಿಲ್ಲೆ ಅಥವಾ 'ಗ್ರಾವೆಲ್' ಹಾಕಿ ಮುಗಿಸದೆ ಇರುವುದರಿಂದ ಜನಗಳಿಗೆ ತುಂಬಾ ತೊಂದರೆ ಯಾಗುತ್ತಿರುವುದು ಸರ್ಕಾರದವರಿಗೆ ತಿಳಿದಿದೆಯೇ :

(*f*) ಈ ರಸ್ತೆಗಳನ್ನು ಒಳ್ಳೆಯಸ್ಥಿತಿಗೆ ತರಲು ಸರ್ಕಾರದವರು ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಯೋಚಿಸಿದ್ದಾರೆ ? ಇದಕ್ಕೆ ಉತ್ತರವಾಗಿ (*a*) ಯಿಂದ (*d*) ವರೆಗಳನ್ನು ನಥಯ ಮುಂದಿಡರಾಗಿದೆ. (*e*) ಸುರಕ್ಷಿತವಾದ ಹಂತದವರೆಗೆ ತರದೆ ಅಂತಹ 35 ಕಾಮಗಾರಿ ಗಳನ್ನು ನಿಲ್ಲಿಸರಾಗಿದೆಯೆಂದು ಈಗ ವರದಿಯಾಗಿದೆ.

(*f*) ಮುಂದೆ ಅವುಗಳನ್ನು ಸುರಕ್ಷಿತವಾದ ಹಂತಕ್ಕೆ ತರಲು ಕ್ರಮವನ್ನು ಕೈಕೊಳ್ಳರಾಗುವುದು ?

ನಾನು ಸರ್ಕಾರಕ್ಕೆ ಹೇಳಬೇಕಾದುದು ಇಷ್ಟು, ಸರ್ಕಾರದವರು ಕೊಟ್ಟ ಉತ್ತರದ ಪ್ರಕಾರ 35 ಕಾಮಗಾರಿಗಳನ್ನು ಇನ್ನೂ ಒಂದು ಸುರಕ್ಷಿತ ಸ್ಥಿತಿಗೆ ತರಲಲ್ಲ. ಸುರಕ್ಷಿತ ಸ್ಥಿತಿ ಎಂದರೇನು ? ಸರ್ಕಾರದ ಕಾನೂನಿನ ಪ್ರಕಾರ ಇದಕ್ಕೇನು ಅರ್ಥವೆಂಬುದು ಗೊತ್ತಾ ಗುವುದಿಲ್ಲ. ನನ್ನ ದೃಷ್ಟಿಯ ಪ್ರಕಾರ ಕನಿಷ್ಟ ರಸ್ತೆಯ ನಿರ್ಮಾಣವೆಂದರೆ, ಅದರ ಮೇಲೆ ಖಡಿಹಾಕಿ ಸಾಧಾರಣ ಕರ್‌ವರ್ಟ್ ನಿರ್ಮಾಣ ಮಾಡಿಕೊಟ್ಟು ರಸ್ತೆಯಮೇಲೆ ಬಂಡಿ ಮತ್ತು ಇತರ ವಾಹನಗಳು ಓಡಾಡುವ ರೀತಿಯಲ್ಲಿ ಮಾಡಿದರೆ ಅದು ಸುರಕ್ಷಿತ ಹಂತವೆಂದು ಹೇಳ ಬಹುದು. ಖಡಿ ಹಾಕುವುದು, ಮಟ್ಟಮಾಡುವುದು ಎರಡನೆಯ ಘಟ್ಟ, ಧಾರವಾಡ ಜಿಲ್ಲೆ ಯಲ್ಲಿ 35 ರಸ್ತೆಗಳನ್ನು ಸುರಕ್ಷಿತವಾದ ಹಂತಕ್ಕೆ ತಂದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಸುರಕ್ಷಿತವಾದ ಹಂತಕ್ಕೆ ತರಲು ಕ್ರಮ ಕೈಕೊಳ್ಳರಾಗುವುದು ಎಂದು ಹೇಳಿದ್ದಾರೆ. ಈ ಉತ್ತರ ಕೊಟ್ಟರುವುದು ಆರು ತಿಂಗಳ ಕೆಳಗೆ. ಈ ಆರು ತಿಂಗಳಲ್ಲಿ ನಾನು ಆ ಪ್ರದೇಶದ ಕೆಲವು ಕಡೆ ಪ್ರವಾಸ ಮಾಡಿದ್ದೇನೆ. ಈ ಬಗ್ಗೆ ಕ್ರಮ ಕೈಕೊಂಡಿರುವುದು ಪ್ರತ್ಯಕ್ಷವಾಗಿ ಎಲ್ಲಿಯೂ ನನಗೇ ಕಂಡುಬಂದಿಲ್ಲ. ಜಿಲ್ಲಾಮಟ್ಟದಲ್ಲಿ ವರದಿಮಾಡುತ್ತಾರೋ ಇಲ್ಲವೋ ಗೊತ್ತಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—'In course of time' ಎಂದು ಹೇಳಿದ್ದೇವೆ.

ಶ್ರೀ ಎ. ಪಿ. ದೊಡ್ಡಮೇಟಿ.—In course of time ಎಂದರೇನು ? ಯಾವ ಶಬ್ದವನ್ನು ಬೇಕಾದರೂ ಉಪಯೋಗಮಾಡಲಿ, ಕೆಲಸ ಆಗಬೇಕು. Course of time ಎಂದರೆ ಯಾವಾಗ ರಾದರೂ ಆದೀತು. ಹಳ್ಳಿಗಾಡಿನಲ್ಲಿ ಅಲ್ಲಿನ ಜನರ ಅನುಕೂಲಕ್ಕಾಗಿ, ಎಲ್ಲಕ್ಕಿಂತ ಹೆಚ್ಚಾಗಿ ಅವರ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಬೇಕಾದರೆ ರಸ್ತೆಗಳು ಅಗತ್ಯ. ಹಾಗಾಗಿ ಏನಾಗಿದೆಯೆಂದರೆ, ಎಷ್ಟೋ ರಸ್ತೆಗಳನ್ನು ನಿರ್ಮಾಣಮಾಡಿದ್ದರೆ. ನಾವು ಮುಂದೆಹೋಗಿ ಬೇಕಾದ ಭೂಮಿಯನ್ನು ಜನರಿಂದ ಕೊಡಿಸಿದ್ದೇವೆ. ಒಳ್ಳೆ ಭೂಮಿಯಲ್ಲಿ ರಸ್ತೆಗಾಗಿ ತಕ್ಕಷ್ಟನ್ನು ಕೊಡಿಸಬೇಕೆಂದು ಎಕ್ಸಿಕ್ಯೂಟಿವ್ ಇಂಜಿನಿಯರು ಕೇಳಿದಾಗ ಅದನ್ನು ಕೊಡಿಸಿದ್ದೇವೆ.

ಕಾಡುದಾರಿಯಲ್ಲಿ ಅಡ್ಡಾಡುವುದಕ್ಕೆ ಬರುವುದಿಲ್ಲ. ಬೇರೆದಾರಿಯಲ್ಲಿ ಆಡ್ಡಾಡಿ ಅವು ಮೂರು ಪೂರು ಪಟ್ಟು ಕಷ್ಟರುವುದರ ಉದಾಹರಣೆ ಇದೆ. ಕೆಲವೆಂದು ಉದಾಹರಣೆಗಳನ್ನು ಹೇಳಲಕ್ಕೆ ಅಪೇಕ್ಷೆಪಡುತ್ತೇನೆ.

ರೋಣ ತಾಲ್ಲೂಕಿನಲ್ಲಿ :—

ಹೊಸಹಳ್ಳ ಇಟಗಿ	3	ಮೈಲು
ಜಗಳೂರು—ಅಪ್ರೋಚ್ಸ್	1	,,
ಹರೇಮಣ್ಣೂರ—ಹುನಗುಂಡಿ	5	,,
ಸೋಮನಕಟ್ಟಿ—ಮಳವಾಡಿ	6	,,
ದಿಂಡೂರು—ಅಪ್ರೋಚ್ಸ್	1	,,
ಒಟ್ಟು...	16	,,

(ಶ್ರೀ ಎ. ಜೆ. ದೊಡ್ಡಮೇಟಿ)

ಗದಗ ತಾಲ್ಲೂಕಿನಲ್ಲಿ :

ನೀರಲಗಿ—ಬೇನಕೊಪ್ಪ—3	ಮೈಲ
ಗದಗ—ಹಿತಲಗೇರಿ—3	ಮೈಲ

ನರಗುಂದ್ :—

ಕಲಹಿಳ—ಚಿಕ್ಕನರಗುಂದ—7	,,
ಶಿರೋಳ—ಹಿಡ್ಲ—6	,,
ಅಳವಾಡಿ—ನರಗುಂದ—6	,,
ಕಲಕೇರಿ—ಕಣಿವೆಕಟ್ಟಿ	

ನವಲಗುಂದ್ :—

ಬ್ಯಾಹಟ್ಟಿ—ಅಳಗವಾಡಿ—16	,,
ಅಣಗೇರಿ—ಬನ್ನೂರ—12	,,
ನವಲಗುಂದ—ಹೈತಾಳ—11	,,
ಶಿಬನಹಳ್ಳಿ—ಸ್ಟೇಷನ್—11	,,

ಮುಂಡರಗಿ ಹೇಳಿದಲ್ಲ ಸಹಿತ ಕೆಲವಾರು ಮಾರ್ಗಗಳು ದುರಸ್ತಾಗದೇ ಉಳಿದಿವೆ. ಬೇಗನೆ ಸುರಕ್ಷತೆಗೆ ತಂದೇ ತರುತ್ತೇವೆ ಎಂದು ಆಗಲೇ ಹೇಳಿದ್ದೀರಿ. ಎಂದು ಎನ್ನುವುದನ್ನು ನಿರ್ದಿಷ್ಟವಾಗಿ ಹೇಳಲ್ಲ. ತಾಲ್ಲೂಕು ಬೋರ್ಡಿಗೆ ಒಪ್ಪಿಸುವುದಕ್ಕೆ ಮುಂಚೆ ಸೇಫ್ ಸ್ಟೇಜಿಗೆ ತಂದರೆ ಒಳ್ಳೆಯದು. ಮುಂದೆ ತಾಲ್ಲೂಕು ಬೋರ್ಡಿನವರು ತಮಗೆ ಅನುಕೂಲವಾದರೆ ಇಟ್ಟುಕೊಳ್ಳಬಹುದು ಬೇಡವಾದರೆ ಪಿ.ಡಬ್ಲ್ಯು.ಡಿ.ಗೆ ಒಪ್ಪಿಸಬಹುದು. ಆದ್ದರಿಂದ ಈ ಕಾಂಗಾರಿಗಳನ್ನು ಆದಷ್ಟು ಬೇಗ ಸುರಕ್ಷಿತ ಸ್ಥಿತಿಗೆ ತರಲು ಪ್ರಯತ್ನವಾಡಬೇಕು. ಇಲ್ಲದೇ ಇದ್ದರೆ—ತಾವು ಈಗ ಗೇಣಿ ಶಾನನ ಜಾರಿಗೆ ತರುತ್ತೀರಿ. ಅದನ್ನು ತರುವುದರ ಉದ್ದೇಶ ರೈತರು ಹೆಚ್ಚು ಬೆಳೆ ಬೆಳೆಯಬೇಕೆಂದು ಆಗಿದೆ. ರೈತನ ಭೂಮಿಯಲ್ಲಿ ಸುಮಾರು ಒಂದು ಮೈಲವಾರ್ಗ 33 ಪೋಟಿನ ಮೂರುವಾರ್ಗಗಳನ್ನು ಮಾಡಿದರೆ ಎಷ್ಟು ಭೂಮಿ ಹೋಗುತ್ತದೆ ? ತ್ಯಾರಾಸಿ ಮಾಡಿನೋಡಿ : ಕೀಗೆಲ್ಲಾ ರೈತರಿಗೆ ಬಹಳಷ್ಟು ತೊಂದರೆಯಾಗಿದೆ. ಆ ಕಾರಣಕ್ಕಾಗಿ ತಾವು ಇನ್ನೂ ಹೆಚ್ಚು ವಿಶಾಲ ಮಾಡದೇ ಯಾವ ಕಾಂಗಾರಿ ತೆಗೆದುಕೊಂಡಿದ್ದೀರೋ ಅವನ್ನು ಪೂರ್ಣವಾಗಿ ಸೇಫ್ ಸ್ಟೇಜಿಗೆ ತರಬೇಕು. ಇಲ್ಲದೇ ಇದ್ದರೆ ಸರಕಾರದ ದುಡ್ಡು ಹಾಳಾಗುತ್ತದೆ. ಲಕ್ಷಾಂತರ ರೂಪಾಯಿ ಖರ್ಚು ಮಾಡುತ್ತೀರಿ. ಭಾರಿ ಮಳೆಆಯಿತು ಎಂದರೆ ಎಲ್ಲಾ ಹಾಳಾಗಿ ಹೋಗುತ್ತದೆ. ಆಮೇಲೆ ಮೊದಲು ಎಲ್ಲದ್ದೆವೋ ಅಲ್ಲಯೇ ಉಳಿಯುತ್ತೇವೆ. ಆದಕಾರಣ ತಾವು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಈ ವಿಚಾರದಲ್ಲ ಯಾವ ರೀತಿಯಾದ ಅಲಕ್ಷ್ಯ ಆಗದ ರೀತಿಯಲ್ಲಿ ಅವನ್ನು ಸುರಕ್ಷತೆಗೆ ತಂದೇ ತರಲಿಕ್ಕೆ ಕ್ರಮತೆಗೆದುಕೊಳ್ಳಬೇಕು. ಫಂಡ್ ಯಾವ ಹೆಡ್‌ನಲ್ಲಿ ತೆಗೆದುಕೊಳ್ಳಬೇಕು, ಎಷ್ಟು available ಆಗಿದೆ ಎಂಬುದನ್ನು ಹೇಳುವುದು ನನ್ನ ಕರ್ತವ್ಯವಲ್ಲ. ಎಲ್ಲಾದರೂ ಹಣ ತೆಗೆದುಕೊಳ್ಳಿ, ತೆರಿಗೆ ಹಾಕಿರಿ, ಅಂತೂ ಒಟ್ಟಿನಮೇಲೆ ಈ ಕಾರ್ಯಗಳು ಮಾತ್ರ ಆಗಬೇಕು. ಹಳ್ಳಿಯವರು ಪಟ್ಟಣಕ್ಕೆ ಬಂದು ನೋಡಿದಾಗ ನಮಗೆ ಮಾತ್ರ ಸಿಮೆಂಟ್ ಇಲ್ಲ ಎನ್ನುತ್ತಾರೆ. ಇಲ್ಲ ನೋಡಿ ಒಂದರಮೇಲೊಂದು ಮನೆ ಕಟ್ಟಲಿಕ್ಕೆ ಹತ್ತಿದ್ದಾರೆ ನಾವು ಕನರಿನಲ್ಲ ಮಣ್ಣು ಬಟ್ಟೆ ಉಟ್ಟುಕೊಂಡು ಓಡಾಡಬೇಕು, ಇದೇನು ನ್ಯಾಯ ಎಂದು ಕೇಳುತ್ತಾರೆ. ನೀವೂ ನ್ಯಾಯವರೇ ರೈತರು. ರೈತರಿಗೆ ಬೇಕಾದ್ದನ್ನೂ ಮಾಡುವಾಗ ಮಾತ್ರ ಜಾಗ್ರತೆ ಮಾಡುವುದಿಲ್ಲ, ಈ ಕಾರ್ಯಗಳು ಪ್ರತ್ಯಕ್ಷವಾಗಿ ಕ್ಷತಿಗೆ ಇಳಿಯದಿರುವುದು ದುರ್ದೈವದ ನಂಗತಿ ಆದಕಾರಣ ಈ ವಿಷಯದಲ್ಲಿ ಸ್ಪಷ್ಟವಾದ ನಿರ್ದಿಷ್ಟವಾದ ಉತ್ತರ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ

†Sri Kadidal Manjappa.—Mr. Speaker, I very much appreciate the spirit with which this discussion is raised by the Hon'ble Member. There are a number of incomplete roads which were constructed in connection with the scarcity relief and which are incomplete. Not only in Dharwar District, in other Districts too, there are a number of incomplete works. We have said on the floor of this House a number of times that it has been the policy of the Government to bring the incomplete works to a safe stage. That has been the policy we have followed. It is true that to a question put by the Hon'ble Member, a reply has been given to the effect that action will be taken to bring them to a safe stage in course of time. The Hon'ble Member is aware that with some difficulty we had to provide funds for flood relief and for sinking irrigation wells, though we got some assistance from the Government of India. On account of these reasons, we were not able to provide funds for completing these roads. Whenever funds are available for this purpose, we will take steps to complete these roads and bring them to a safe stage. We will consider the request of the Hon'ble Member very symathetically.

Mr. Deputy Speaker.—The House will now rise and meet to morrow at 8-30. a.m.

The House adjourned at Thirty Minutes past Twelve of the Clock to meet again at Thirty Minutes past Eight of the Clock on Saturday the 2nd September 1961.

WD 6631—GPB—500—(L.A. New)—28-3-67